# ಮೊಬೈಲ್ ಕೊಟ್ಟರೆ ಸಾಲದು ಬಳಕೆಯ ಪಾಠವೂ ಬೇಕು



**ಮಕ್ಕಳ ಕೈಗೆ ಮೊಬೈಲ್ ಕೊಡುವುದು ಈಗ ಅನಿವಾರ್ಯ. ಮೊಬೈಲ್ ಬಳಕೆಯ ರೀತಿನೀತಿ ಬಗ್ಗೆ ಎಳೆಯರಿಗೆ ಅರಿವು ಮೂಡಿಸುವ ಕಲಿಕೆ ಈಗಿನ ಅಗತ್ಯ.**

■ ಸ್ವಯಂಪ್ರಭಾ

ಪರಿಸ್ಥಿತಿ ಮಕ್ಕಳ ಸ್ವಭಾವವನ್ನು ರೂಪಿಸುತ್ತದೆ. ಒಳ್ಳೆಯ ಪಾಠ, ಶಿಷ್ಟಾಚಾರದ ರಿವಾಜು, ತಿದ್ದುವಿಕೆಗಳು, ಅವರ ಸ್ವಭಾವಗಳು, ಇವೆಲ್ಲ ಮಕ್ಕಳನ್ನು ತಪ್ಪು ದಾರಿಗೆ ಹೋಗದಂತೆ ತಡೆಯುತ್ತವೆ. ಕಳೆದ ವರ್ಷ ಲಾಕ್‌ಡೌನ್ ನೆಪದಲ್ಲಿ ಹೆಚ್ಚಿನ ಮಕ್ಕಳ ಕೈಗೆ ಮೊಬೈಲ್ ಬಂದುಬಿಟ್ಟಿತಲ್ಲ. ಜಗತ್ತನ್ನೇ ಅಂಗೈಯಲ್ಲಿ ಇಟ್ಟುಕೊಂಡ ಅವರಿಗೆ ಒಂದು ಚೂರು ಹೆಚ್ಚೇ ಆತ್ಮವಿಶ್ವಾಸ ಬಂದುಬಿಟ್ಟಿದೆ. ಹೊಸ ವಿಚಾರಗಳು, ಹೊಸ ವಸ್ತುಗಳನ್ನು ಪಡೆಯುವಾಗ, ಅದಕ್ಕೆ ಪೂರಕವಾದ ಮಾರ್ಗದರ್ಶನವನ್ನೂ ಪಡೆಯಬೇಕು. ಮಕ್ಕಳಿಗೆ ಮೊಬೈಲ್ ಕೊಡುವಾಗ, ಅವರಿಗೆ ಮೊಬೈಲ್ ಬಳಕೆಗೆ ಪೂರಕವಾದ ಮಾರ್ಗದರ್ಶನ ನೀಡುವ ಕೆಲಸಗಳೇನೂ ಆಗಲಿಲ್ಲ.

ಇಲ್ಲೊಂದು ದೊಡ್ಡ ಕಥೆಯೇ ಇದೆ ನೋಡಿ. ಎಂಟನೇ ತರಗತಿಯ ಹುಡುಗ ರಾಜುಗೆ ಒಂದು ಸೀಕ್ರೆಟ್ ಗೊತ್ತಾಗಿಬಿಟ್ಟಿದೆ. ಅವನು ಮೊನ್ನೆ ನೋಟ್ಸ್ ಪ್ರಿಂಟ್ ಮಾಡಿಸಿಕೊಳ್ಳಲು ಹೋದ ಸಂದರ್ಭದಲ್ಲಿ ಅಂಗಡಿಯಾತ, 'ನೋಟ್ಸ್ ಅನ್ನು ಇಮೇಲ್ ಮಾಡಿ' ಎಂದ. ಬಹಳ ದೊಡ್ಡ ಪಿಡಿಎಫ್ ಫೈಲ್ ಇದ್ದುದರಿಂದ ರಾಜುವಿನ ಮೊಬೈಲ್‌ನಿಂದ ಆ ಫೈಲ್ ಸುರಳೀತವಾಗಿ ಹೋಗಲಿಲ್ಲ. ಆಗ, ಅಂಗಡಿಯಾತ, 'ನಮ್ಮ ಅಂಗಡಿಯಲ್ಲಿ ವೈಫೈ ಇದೆ. ಪಾಸ್‌ವರ್ಡ್ ತಗೊಳ್ಳಿ. ಬೇಗನೇ ಫೈಲ್ ಬರುತ್ತದೆ' ಎಂದು ಸಲಹೆ ಮಾಡಿದ. ಅಂಗಡಿಯಾತನ ಸಲಹೆಯ ಮೇರೆಗೆ ವೈಫೈ ಪಾಸ್‌ವರ್ಡ್ ಪಡೆದ ರಾಜು, ಕ್ಷಿಪ್ರವಾಗಿ ನೋಟ್ಸ್ ಪ್ರಿಂಟ್ ಮಾಡಿಸಿಕೊಂಡು ಮನೆಗೆ ಬಂದ. ಅವನಿಗೆ ಹೊಸದೊಂದು ವಿಚಾರ ಹೊಳೆದುಬಿಟ್ಟಿತ್ತು. ಅಂಗಡಿಯ ವೈಫೈ ಸಿಕ್ಕಿರುವುದು ಅವನಿಗೆ ಬಹಳ ಖುಷಿ ತಂದಿತ್ತು.

ಮರುದಿವಸ ಶಾಲೆ ಬಿಟ್ಟಕೂಡಲೇ ಅಂಗಡಿಯ ಪಕ್ಕವೇ ನಿಂತು, ತನ್ನ ಮೊಬೈಲ್‌ಗೆ ಪಾಸ್‌ವರ್ಡ್ ಅಳವಡಿಸಿ, ಆ ವೈಫೈ ಸಂಪರ್ಕ ಪಡೆದ. ತನಗೆ ಬೇಕಾದುದನ್ನು ನೋಡಿದ. ಒಂದಿಷ್ಟು ವಿಡಿಯೊಗಳನ್ನು ಡೌನ್ಲೋಡ್ ಮಾಡಿಕೊಂಡು, ನಂತರ ಮನೆಯತ್ತ ಮರಳಿದ. ಆದರೆ ಅಂಗಡಿಯಾತನಿಗೂ ತನ್ನ ಡೇಟಾ ಸಂಪತ್ತನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದು ಗೊತ್ತಿರುತ್ತದೆ. ಅವರು ವೈಫೈ ಪಾಸ್‌ವರ್ಡ್ ಎರಡು ಮೂರು ದಿನಗಳಿಗೆ ಬದಲಾಯಿಸುತ್ತಾರೆ. ಹಾಗಂತ ರಾಜೂ ಕೈ ಚೆಲ್ಲಿ ಕೂರಲಿಲ್ಲ. ಮತ್ತೊಬ್ಬ ಸ್ನೇಹಿತನಿಗೆ ಜಾಸ್ತಿ 'ಕೆಬಿ'ಗಳ ಒಂದು ಫೈಲ್ ಪ್ರಿಂಟ್ ತೆಗೆಯುವಂತೆ ಪುಸಲಾಯಿಸಿದ. ಮತ್ತೆ ಅದೇ ಮಾದರಿಯಲ್ಲಿ ಅಂಗಡಿಯಾತ ವೈಫೈ ಪಾಸ್‌ವರ್ಡ್ ಹೇಳುವಂತೆ ಪರಿಸ್ಥಿತಿ ಸೃಷ್ಟಿಸಿದ.

ಈ ವಿಷಯವೆಲ್ಲ ಮೊದಲು ಗೊತ್ತಾದುದು ರಾಜುವಿನ ಸ್ನೇಹಿತೆಯ ತಾಯಿ ನೀಲಿಮಾಗಳಿಗೆ. ಪ್ರತಿದಿನ ಸಂಜೆ ತನ್ನ ಮೊಬೈಲ್‌ನಲ್ಲಿ ವಾಟ್ಸಾಪ್ ಸ್ಥಗಿತಗೊಳ್ಳುವುದನ್ನು ನೋಡಿ ನೀಲಿಮಾಳಿಗೆ ಯಾಕೋ ಸಂಶಯ ಮೂಡಿತು. ಹಾಗೆ ಗಮನಿಸುತ್ತಿದ್ದಾಗ, ಮಗಳು, ತನ್ನ ಮೊಬೈಲ್‌ನಿಂದ ಹಾಟ್‌ಸ್ಪಾಟ್ ಎರವಲು ಪಡೆಯುತ್ತಿರುವುದು ಗೊತ್ತಾಯಿತು. ಗಂಟೆಗಟ್ಟಲೆ ಸ್ನಾಪ್ ಚಾಟ್‌ನಲ್ಲಿ ಮಾತನಾಡುತ್ತ, ಇನ್‌ಸ್ಟಗ್ರಾಂನಲ್ಲಿ ಸ್ಟೇಟಸ್ ನೋಡುತ್ತ, ವಾಟ್ಸಾಪ್ ಅನ್ನು ಪೂರ್ತಿ ಜಾಲಾಡುವಷ್ಟರಲ್ಲಿ ಡೇಟಾ ಖರ್ಚಾಗಿಬಿಡುತ್ತಿತ್ತು. ಪುಟ್ಟಿಯನ್ನು ನೀಲಿಮಾ ತರಾಟೆಗೆ ತೆಗೆದುಕೊಂಡಳು. 'ನೀನು ಹೀಗೆ ಡೇಟಾ ಖಾಲಿ ಮಾಡುತ್ತಿದ್ದರೆ, ವ್ಯವಹಾರ, ಮಾತುಕತೆಗೆ ಅಗತ್ಯವಿದ್ದರೂ ಡೇಟಾ ಇರುವುದಿಲ್ಲ. ಹಾಗಾದರೆ ಅಮ್ಮನಿಗೆ ಮೊಬೈಲ್ ಇದ್ದೇನು ಪ್ರಯೋಜನ?' ಎಂದು ದಬಾಯಿಸಿದಳು.

ಪುಟ್ಟಿಗೆ ತಾನು ಮಾಡುತ್ತಿರುವುದು ತಪ್ಪೆಂದೇ ಗೊತ್ತಾಗಲಿಲ್ಲ. 'ಅಮ್ಮ, ರಾಜು ಅಂಗಡಿಯ ವೈಫೈ ಬಳಸುತ್ತಾನೆ. ನಾನು ನಿನ್ನಿಂದ ಹಾಟ್‌ಸ್ಪಾಟ್ ತೆಗೆದುಕೊಳ್ಳಬಾರದಾ?' – ಮಗಳ ಪ್ರಶ್ನೆಗೆ ಅಮ್ಮನ ಸಿಟ್ಟು ಜರ್ರನೆ ಇಳಿಯಿತು. ಮಕ್ಕಳ ಡೇಟಾ ಕಳ್ಳತನದ ಕಥೆಗಳು ಹೊರಬಿದ್ದುದು ಈಗ.

ಇತರರಿಗೆ ಸೇರಿದ ವಸ್ತುಗಳನ್ನು ನಾವು ಬಳಸಬಾರದು. ಆದರೆ ಡೇಟಾ ಕೂಡ ಒಂದು ಮಾದರಿಯ ಸಂಪತ್ತು ಎಂಬ ಅರಿವನ್ನು ಮೂಡಿಸಿಕೊಳ್ಳುವುದು ಮುಖ್ಯ. ಡಿಜಿಟಲ್ ಯುಗದಲ್ಲಿ ಬಾಳಬೇಕಾದ ಮಕ್ಕಳಿಗೆ ಈ ರೀತಿಯ ಅರಿವು ಇಲ್ಲದೇ ಇದ್ದರೆ, ಅವರು ಕಷ್ಟಪಡಬೇಕಾದೀತು. ಆದರೆ ಇದನ್ನು ಮಕ್ಕಳಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಯಾವುದೇ ವ್ಯವಸ್ಥೆಗಳು ನಮ್ಮಲ್ಲಿ ಇಲ್ಲ. ಅಷ್ಟೇ ಅಲ್ಲ, ಪೋಷಕರೇ ನಾಲ್ಕು ಒಳ್ಳೆಯ ಮಾತುಗಳಲ್ಲಿ ಈ ವಿಚಾರಗಳನ್ನು ಹೇಳಿಕೊಡೋಣವೆಂದರೆ, 'ಡೇಟಾ ಅನ್‌ಲಿಮಿಟೆಡ್ ಅಮ್ಮಾ... ಅದನ್ನು ಕದ್ದರೆ ಅಂಗಡಿಯವನಿಗೆ ಗೊತ್ತೇ ಆಗುವುದಿಲ್ಲ' ಎಂದು ರಾಜು ಸಮಜಾಯಿಷಿ ನೀಡುತ್ತಾನೆ.

ಮಕ್ಕಳ ಕೈಗೆ ಮೊಬೈಲ್ ಕೊಟ್ಟರೆ ಅವರ ಶಿಕ್ಷಣಕ್ಕೆ ತೊಡಕಾಗುತ್ತದೆ ಎಂಬುದೊಂದು ಆತಂಕ. ಆ ಮೊಬೈಲ್ ಅನ್ನು ಹೇಗೆ ನಿಯಂತ್ರಿಸಬೇಕು, ಅದರ ಬಳಕೆಯ ಸುತ್ತಮುತ್ತಲಿನ ಶಿಷ್ಟಾಚಾರಗಳೇನು ಎಂಬ ಪಾಠವನ್ನು ಶಾಲೆಗಳಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಸದ್ಯಕ್ಕೆ ಪೋಷಕರೇ ಈ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳ ಮೇಲೆ ಒತ್ತಡ ಹೇರುವುದು ಅನಿವಾರ್ಯವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in